# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2462** |
| ಉತ್ತರಿಸಬೇಕಾದ ದಿನಾಂಕ | : | 23.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ವಿವಿಧ ವಸತಿ ಯೋಜನೆಯಡಿ ಮನೆ ಮಂಜೂರಾಗಿ ವಿವಿಧ ನಿರ್ಮಾಣ ಹಂತದಲ್ಲಿದ್ದ ಮನೆಗಳಿಗೆ ಬಾಕಿ ಇರುವ ಮೊತ್ತವನ್ನು ತಡೆಹಿಡಿಯಲಾಗಿರುವುದರಿಂದ, ರಾಜ್ಯದ ಬಡ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಬಾಕಿ ಮೊತ್ತವನ್ನು ಪಾವತಿಸದಿರಲು ಕಾರಣವೇನು ; ಯಾವಾಗ ಮಂಜೂರು ಮಾಡಲಾಗುವುದು ; (ವಿವರ ನೀಡುವುದು) | ವಿವಿಧ ಯೋಜನೆಗಳಡಿ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ಸರ್ಕಾರವು ಆದೇಶ ಸಂಖ್ಯೆ:ವಇ 154 ಹೆಚ್‌ಎಹೆಚ್ 2019, ದಿನಾಂಕ:16.11.2019 ರಲ್ಲಿ ಮನೆಗಳ ಪ್ರಗತಿಯನ್ನು ಜಿಯೋ ಆಧಾರಿತ "ವಿಜಿಲ್ ಆಪ್" ಮೂಲಕ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಪುನರ್ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುತ್ತಿತ್ತು. ಇದರಿಂದ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯು ವಿಳಂಬವಾಗುತ್ತಿರುವುದನ್ನು ಸರ್ಕಾರವು ಮನಗಂಡು ಆದೇಶ ಸಂಖ್ಯೆ:ವಇ 75 ಹೆಚ್‌ಎಹೆಚ್ 2021, ದಿನಾಂಕ: 07.09.2021 ರಲ್ಲಿ ವಿಜಿಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಪ್ರತ್ಯೇಕವಾಗಿ ಪರಿಶೀಲಿಸುವುದನ್ನು ಮತ್ತಷ್ಟು ಸರಳೀಕರಿಸಿ In-House ಮೂಲಕ ಅಭಿವೃದ್ಧಿ ಪಡಿಸಿರುವ "Indira-Vigil" ವೆಬ್ ಆಪ್ ಮೂಲಕ ಪರಿಶೀಲಿಸಿದ ನಂತರ ಅನುದಾನ ಬಿಡುಗಡೆ ಅನುಮತಿ ನೀಡಿರುತ್ತದೆ. ಅದರಂತೆ ವಿವಿಧ ವಸತಿ ಯೋಜನೆಗಳಡಿ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ಯಾವುದೇ ವಿಳಂಬವಾಗದಂತೆ ಫಲಾನುಭವಿಗಳ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.<br><br>2018-19 ನೇ ಸಾಲಿನಿಂದ 2021-22 ನೇ ಸಾಲಿನ ಫೆಬ್ರುವರಿ-22ರ ಅಂತ್ಯದವರೆಗೆ ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಾಣ ಮಾಡಿ ಕೊಂಡ ಫಲಾನುಭವಿಗಳಿಗೆ ಹಿಂದಿನ ಶ್ರೇಣಿಗಳ ಮನೆಗಳನ್ನು ಒಳಗೊಂಡಂತೆ ರೂ.12,102.99 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಯೋಜನಾವಾರು ವಿವರ ಕೆಳಕಂಡಂತಿದೆ. |

(ರೂ.ಕೋಟಿಗಳಲ್ಲಿ)

| ಯೋಜನೆ | 2018-19 | 2019-20 | 2020-21 | 2021-22 (ಫೆಬ್ರುವರಿ ಅಂತ್ಯಕ್ಕೆ) |
|---|---|---|---|---|
| ಬಸವ ವಸತಿ ಯೋಜನೆ | 1935.84 | 799.70 | 614.65 | 434.20 |
| ದೇವರಾಜು ಅರಸು ವಸತಿ ಯೋಜನೆ | 95.89 | 44.36 | 44.70 | 76.34 |
| ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ | 1200.62 | 753.83 | 693.80 | 623.82 |

| | | | | | | |
|---|---|---|---|---|---|---|
| | | ಪ್ರಧಾನ ಮಂತ್ರಿ ಆವಾಸ್ ಯೋಜನೆ – ಗ್ರಾಮೀಣ | 660.79 | 158.62 | 95.53 | 104.63 |
| | | ಪ್ರಧಾನ ಮಂತ್ರಿ ಆವಾಸ್ ಯೋಜನೆ – ನಗರ | 1089.97 | 325.07 | 325.69 | 846.08 |
| | | ರಾಜೀವ್ ಆವಾಸ್ ಯೋಜನೆ | 109.52 | 2.75 | 2.51 | 1.56 |
| | | ವಾಜಪೇಯಿ ನಗರ ವಸತಿ ಯೋಜನೆ | 208.31 | 307.67 | 269.21 | 277.33 |
| | | **ಒಟ್ಟು** | **5300.94** | **2392.00** | **2046.09** | **2363.96** |
| ಆ) | ಈ ರೀತಿ ಅಪೂರ್ಣಗೊಂಡಿರುವ ಮನೆಯ ಫಲಾನುಭವಿಗಳಿಗೆ ಮತ್ತೊಮ್ಮೆ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಯಾವಾಗ ಆದೇಶ ಹೊರಡಿಸಲಾಗುವುದು ? | ಅಪೂರ್ಣಗೊಂಡಿರುವ ಮನೆಯ ಫಲಾನುಭವಿಗಳಿಗೆ ಮನೆ ಪೂರ್ಣಗೊಳಿಸುವಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತಿಳುವಳಿಕೆ ಪತ್ರವನ್ನು ನೀಡಲಾಗುತ್ತಿದೆ ಹಾಗೂ ಅನುದಾನವನ್ನು ಪ್ರಗತಿಗನುಗುಣವಾಗಿ ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಅಪೂರ್ಣಗೊಂಡಿರುವ ಮನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿ, ಬಿಡುಗಡೆಗೆ ಬಾಕಿ ಇರುವ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುವುದರಿಂದ ಮತ್ತೊಮ್ಮೆ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. | | | | |

ಸಂಖ್ಯೆ :ವಇ 195 ಹೆಚ್‌ಎಎಂ 2022

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು